ಪೂರ್ಣವಾಗಿ ಕಡಿಮೆಯಾಗಿತ್ತು. ಇಬ್ಬರ ಸ್ವಭಾವಗಳು ಅತಿ ಶೀಘ್ರವಾಗಿ, ಸಹಜವಾಗಿ ಹೊಂದಿಕೆಯಾಗಿದ್ದವು. ಒಬ್ಬರಿಗೊಬ್ಬರು ಡಿಸ್ಟರ್ಬ್ ಆಗದಂತೆ ಇರುವುದು, ಇನ್ನೊಬ್ಬರು ಫ್ರೀ ಇರುವುದನ್ನು ನೋಡಿಕೊಂಡು ರೇಡಿಯೊ ಹಾಕುವುದು ಮುಂತಾಗಿ ಯಾವುದೇ ಕರಾರುಗಳಿಲ್ಲದೇ ಸಹಜ ಮೌನ ಒಪ್ಪಂದಗಳಾಗಿ ನಮ್ಮಲ್ಲಿ ಜಗಳಗಳು, ಧುಸುಮುಸು ಆಗುತ್ತಿರಲಿಲ್ಲ. ಹದಿನೈದು ದಿನಗಳೊಳಗೆ ಹಾಸ್ಟೆಲು, ಯುನಿವರ್ಸಿಟಿಯ ಕಟ್ಟಡಗಳು, ಲೈಬ್ರರಿ, ಬಸ್‌ಸ್ಟಾಪು ಎಲ್ಲ ಚಿರಪರಿಚಿತವಾಗಿ ಹೋದವು. ಕ್ಲಾಸ್‌ರೂಮುಗಳು ಹೊಸ ಹರೆಯ ಬಂದು ನಳನಳಿಸಿದವು. ಆಗ ಬಂದು ಭರ್ತಿ ಆದಳವಳು! ''ಸತ್ಯಭಾಮಾ ಅನ್ನೋದು ದ್ವಾಪರಯುಗದ ಹೆಸರು, ಆದರೆ ಇವಳೋ ಆಧುನಿಕ ಭಾಮೆ'' ಅಂತ ಅವಳನ್ನು ನೋಡಿದ ಮೊದಲ ದಿನ ನಕ್ಕಿದ್ದೆವು. ಮೈಯ ಆಕಾರಕ್ಕೆ ತಕ್ಕಂತೆ, ಅಥವಾ ಅದನ್ನು ತೋರಲಿಕ್ಕೆಂದೇ ಫಿಟಿಫಿಟಿಯಾಗಿ ಹೊಲಿದ ಬಿಳಿ ಶರ್ಟು, ಕಡುನೀಲಿ ಕಲರಿನ ಜೀನ್ಸ್ ಪ್ಯಾಂಟು ತೊಟ್ಟಿದ್ದ ಅವಳು ಆಗಿನ ಕಾಲಕ್ಕೆ ತುಂಬ ರೆಬೆಲ್ ಆಗಿ ಕಂಡಿದ್ದಳು ನಮ್ಮ ಸಾದಾಸಿಂಪಲ್ ಕಣ್ಣುಗಳಿಗೆ.

ನಮ್ಮದು ಮೂರನೇ ಮಹಡಿ. ಸತ್ಯಭಾಮೆಗೆ ಎರಡನೇ ಮಹಡಿಯಲ್ಲಿ ಸರಿಯಾಗಿ ನಮ್ಮ ಕೆಳಗಿನ ರೂಮೇ ಅಲಾಟ್ ಆಯಿತು. ಅವಳು ಬಂದ ಮೇಲೆ ಹಾಸ್ಟೆಲಿನ ಗೋಡೆಗಳಿಗೆ ಸಿನಿಮಾ ಹಾಡುಗಳು ಅಪ್ಪಳಿಸತೊಡಗಿದವು. ಕಾರಿಡಾರ್‌ಗಳಲ್ಲಿ ಕದನಗಳು ಪ್ರಾರಂಭವಾದವು. ಕಾಮನ್ ಬಾತ್‌ರೂಮಿನಲ್ಲಿ ಸ್ನಾನಕ್ಕಾಗಿ ಹೊಡೆದಾಟಗಳಾಗತೊಡಗಿದವು. ಯಾರದೋ ಸೋಪು ಕಳುವಾದರೂ, ಇನ್ಯಾರದೋ ಟೂಥ್‌ಪೇಸ್ಟು ಟ್ಯೂಬಿನಿಂದ ಹೊರಬಂದು ಹಾವಿನಂತೆ ಬುರುಬುರು ಬಿದ್ದರೂ ಸತ್ಯಭಾಮಾ ಎಲ್ಲರನ್ನೂ ಕೂಡಿಸಿ ಪಂಚಾಯತಿಕೆ ಮಾಡಿಸಿ, ಕಳ್ಳನನ್ನು ಕಂಡುಹಿಡಿದೇ ಬಿಡುತ್ತೇನೆಂದು ಪೊಲೀಸಿನವರಂತೆ ಪೋಸು ಕೊಡತೊಡಗಿದಳು. ಹಾಸ್ಟೆಲ್ ವಾರ್ಡನ್‌ರ ಮಾತೆಂದರೆ ಅವಳಿಗೆ ಕಿಮ್ಮತ್ತಿಲ್ಲದಂತಾಯಿತು. ಸ್ವಲ್ಪ ಹೆಚ್ಚೇ ವಯಸ್ಸಾಗಿದ್ದರೂ ಇನ್ನೂ ಮದುವೆಯಾಗಿಲ್ಲದ ವಾರ್ಡನ್ ಹಾಸ್ಟೆಲಿನಲ್ಲಿ ಆರಾಮಾಗಿದ್ದರು – ಈ ಸತ್ಯಭಾಮೆ ಬರುವ ತನಕ. ಅವರ ಉದ್ದ ಜಡೆ ಇವಳ ಅಸೂಯೆಗೆ ಕಾರಣವಾಗಿತ್ತೋ, ಸೀರೆಯಲ್ಲೂ ಕಾಣುವ ಸುಂದರ ಮೈಮಾಟ ಬೇಸರ ತರಿಸಿತ್ತೋ ಆ ದೇವರೇ ಬಲ್ಲ. ಅಂತೂ ಅವರನ್ನು ಕಾಡಿಸಿ, ಪೀಡಿಸುವುದೆಂದರೆ ಇವಳಿಗೆ ಏನೋ

